OCTOBER 17, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

ಆತ್ಮನಿರ್ಭರ ಭಾರತ; ಸ್ವದೇಶಿ ನಿರ್ಮಿತಿಯೊಂದಿಗೆ, ರಕ್ಷಣಾ ಕ್ಷೇತ್ರದ ಸ್ವಾವಲಂಬನೆ ಸಾಕಾರ – ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಶ್ಲಾಘನೆ.

'ಜನ ಸೇವೆಯಿಂದ, ದೇಶ ಸೇವೆ' ಮಾಸಿಕ ಅಭಿಯಾನ; ಆತ್ಮನಿರ್ಭರ ಭಾರತ ಪ್ರಕಲ್ಪದ, ಒಳನೋಟದೊಂದಿಗೆ, ಇಂದಿಗೆ ಸಂಪನ್ನ.

ಪ್ರೆಸ್ ರಿಜಿಸ್ಟಾರ್ ಜನರಲ್ ಆಫ್ ಇಂಡಿಯಾ, ಯೋಗೇಶಕುಮಾರ ಬವೇಜಾ, ವಿವಿಧ ಮಾಧ್ಯಮಗಳ ಸಂಪಾದಕರೊಂದಿಗೆ, ಇಂದು ಬೆಂಗಳೂರಿನಲ್ಲಿ, ಸಂವಾದ.

ಭಾರತ ಹಾಗೂ ವೆಸ್ಟ್ ಇಂಡೀಸ್ ಮಧ್ಯೆ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ, ಇಂದು ಸಂಜೆ 7 ಗಂಟೆಗೆ, ಟಿ.20 ಕ್ರಿಕೆಟ್, ಫೈನಲ್ ಪಂದ್ಯ.

<><><>

ಈಗ ವಾರ್ತೆಗಳ ವಿವರ

<><><>

ರಕ್ಷಣಾ ಕ್ಷೇತ್ರದ ಸ್ವಾವಲಂಬನೆ, ಕೇವಲ ಆಶಯವಾಗಿ ಉಳಿದಿಲ್ಲ; ಅದು ವಾಸ್ತವವಾಗಿ ಸಾಕಾರಗೊಳ್ಳುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿಕಸಿತ ಭಾರತ ಮತ್ತು ಆತ್ಮನಿರ್ಭರ ಭಾರತ ಪರಿಕಲ್ಪನೆಗೆ ಇದು ಬಲ ನೀಡಿದೆ ಎಂದು, ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಅಭಿಪ್ರಾಯಪಟ್ಟಿದ್ದಾರೆ. ಕಾರವಾರದ ಐ.ಎನ್.ಎಸ್. ಕದಂಬ ನೌಕಾ ನೆಲೆಯಲ್ಲಿ, ಬಹೋಪಯೋಗಿ ನೌಕೆ, ಐ.ಎನ್.ಎಸ್. ಸಮರ್ಥಕ್‌ಅನ್ನು ಭಾರತೀಯ ನೌಕಾ ಪಡೆಗೆ, ಸೇವಾರ್ಪಣೆಗೊಳಿಸಿ, ಅವರು ಮಾತನಾಡಿದರು. ಕೇಂದ್ರ ಸರ್ಕಾರದ 'ಮೇಕ್ ಇನ್ ಇಂಡಿಯಾ' ಆಶಯದಡಿ, ಲಾರ್ಸನ್ ಆಂಡ್ ಟ್ಯುಬ್ರೋ ದೇಶೀಯವಾಗಿ ನಿರ್ಮಾಣಗೊಳಿಸುತ್ತಿರುವ, ನಾಲ್ಕು ಬಹೋಪಯೋಗಿ ನೌಕೆಗಳ ಪೈಕಿ, ಸಮರ್ಥಕ್ ನೌಕೆ ಮೊದಲನೆಯದ್ದಾಗಿದೆ, ಎಂದರು. ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕೃ ಣ ಸ್ವಾಮಿನಾಥನ್, ಫ್ಲ್ಯಾಗ್ ಆಫೀಸರ್ ಕಮಾಂಡಿಂಗ್–ಇನ್–ಚೀಫ್ ವೈಸ್ ಅಡ್ಮಿರಲ್ ಸಂಜಯ್ ವತ್ಸಾಯನ್, ಕರ್ನಾಟಕದ ಫ್ಲ್ಯಾಗ್ ಆಫೀಸರ್, ರಿಯರ್ ಅಡ್ಮಿರಲ್ ವಿಕ್ರಮ್ ಮೆನನ್ ಸೇರಿದಂತೆ, ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

<><><>

ಕಾವೇರಿ ಆರತಿ ಕಾರ್ಯಕ್ರಮ, ನಾಡಿನ ಸಂಸ್ಕೃತಿ, ಪರಂಪರೆ ಹಾಗೂ ಪ್ರಕೃತಿಯೊಂದಿಗಿನ ಅವಿನಾಭಾವ ಸಂಬಂಧದ ಪ್ರತೀಕವಾಗಿದೆ ಎಂದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಬಣ್ಣಿಸಿದ್ದಾರೆ. ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣದ, ಕೃಷ್ಣರಾಜಸಾಗರ ಅಣೆಕಟ್ಟೆಯ ಬೃಂದಾವನ ಉದ್ಯಾನವನದಲ್ಲಿ, ಕಾವೇರಿ ಆರತಿ ಕಾರ್ಯಕ್ರಮದಲ್ಲಿ, ಮುಖ್ಯಮಂತ್ರಿ ತಮ್ಮ ಪತ್ನಿ ಉ ಾ ಅವರೊಂದಿಗೆ ಪಾಲ್ಗೊಂಡು, ಕಾವೇರಿ ಮಾತೆಗೆ ಪೂಜೆ ಸಲ್ಲಿಸಿದರು. ಬಳಿಕ ಮಾತನಾಡಿ, ತಾಯಿ ಕಾವೇರಿಯ ಜಲಧಾರೆ, ಸದಾ ನಾಡಿನ ನೆಲವನ್ನು ಹಸಿರಾಗಿಸಲಿ. ಜನಜೀವನವನ್ನು ಸಮೃದ್ಧಗೊಳಿಸಲಿ. ರೈತರ ಬದುಕಿನಲ್ಲಿ ಸುಖ–ಸಂತೋ 'ದ ಬೆಳಕು ಮೂಡಿಸಲಿ ಎಂದರು. ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ, ಡಾಕ್ಟರ್ ನಿಶ್ಚಲಾನಂದನಾಥ ಸ್ವಾಮೀಜಿ, ಸೇರಿದಂತೆ ಅನೇಕ ಪೀಠಾಧಿಪತಿಗಳು ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸೇರಿದಂತೆ, ಶಾಸಕರು, ವಿಶೇಷ ಆಹ್ವಾನಿತರು, ಕಾವೇರಿ ಆರತಿ ಕಾರ್ಯಕ್ರಮದಲ್ಲಿ, ಪಾಲ್ಗೊಂಡಿದ್ದರು.

<><><>

ನೂತನ ರಾಜ್ಯಪಾಲರಾಗಿ ಅಧಿಕಾರ ಸ್ವೀಕರಿಸಿದ, ಡಾಕ್ಟರ್ ಸುಧಾ ಯಾದವ ಅವರಿಗೆ, ಕೇಂದ್ರ ಶಿಕ್ಷಣ ಖಾತೆ ಸಚಿವ ಪ್ರಲ್ಹಾದ ಜೋಶಿ, ಅಭಿನಂದಿಸಿದ್ದಾರೆ. ರಾಜ್ಯದ ಎರಡನೇ ಮಹಿಳಾ ರಾಜ್ಯಪಾಲರಾಗಿ ಜವಾಬ್ದಾರಿ ವಹಿಸಿಕೊಂಡಿರುವ ಡಾಕ್ಟರ್ ಸುಧಾ ಯಾದವ ಅವರ, ಜನಕಲ್ಯಾಣ ಕಾರ್ಯಗಳಿಗೆ, ಮತ್ತಷ್ಟು ಶಕ್ತಿ ದೊರೆಯಲಿ ಎಂದು, ಎಕ್ಸ್ ಮಾಧ್ಯಮದಲ್ಲಿ, ಶುಭಾಶಯ ಕೋರಿದ್ದಾರೆ.

<><><>

ಹೊಸ ದಿಲ್ಲಿಯ ಕೇಂದ್ರ ವಾರ್ತಾ ಶಾಖೆಯ, ಬೆಂಗಳೂರು ಘಟಕ, ಇಂದು ಬೆಂಗಳೂರಿನಲ್ಲಿ, ವಾರ್ತಾ ಕಾರ್ಯಾಗಾರ ಆಯೋಜಿಸಿದೆ. ಪ್ರೆಸ್ ರಿಜಿಸ್ಟಾರ್ ಜನರಲ್ ಆಫ್ ಇಂಡಿಯಾ, ಪ್ರಧಾನ ಮಹಾ ನಿರ್ದೇಶಕ ಯೋಗೇಶಕುಮಾರ ಬವೇಜಾ, ಮಾಧ್ಯಮ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಮುದ್ರಣ ಮತ್ತು ನಿಯತ ಕಾಲಿಕೆಗಳ ನೋಂದಣಿ ಕಾಯ್ದೆ–2023 ಮತ್ತು ಪ್ರೆಸ್ ಸೇವಾ ಪೋರ್ಟಲ್ ಕುರಿತು, ಅವರು ಮಾಹಿತಿ ನೀಡಲಿದ್ದಾರೆ. ರಾಜ್ಯ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿ ಜೆ.ಮಂಜುನಾಥ ಹಾಗೂ ಸಾರ್ವಜನಿಕ ಸಂಪರ್ಕ ಮತ್ತು ವಾರ್ತಾ ಇಲಾಖೆ ಆಯುಕ್ತ ಎಂ.ಎನ್ ಅನುಚೇತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಮುದ್ರಣ, ವಿದ್ಯುನ್ಮಾನ ಸೇರಿದಂತೆ, ವಿವಿಧ ಮಾಧ್ಯಮಗಳ ಆಹ್ವಾನಿತ ಸಂಪಾದಕರು, ಈ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದಲ್ಲಿ, ಕಳೆದ ಒಂದು ವ 'ದಲ್ಲಿ, 3 ಸಾವಿರದ 694 ಪ್ರಕರಣಗಳನ್ನು, ವಿಲೇವಾರಿ ಮಾಡಲಾಗಿದೆ. ಸೂಕ್ತ ಮಾಹಿತಿ ನೀಡದ 80 ಅಧಿಕಾರಿಗಳಿಗೆ, 7 ಲಕ್ಷದ 78 ಸಾವಿರ ರೂಪಾಯಿ ದಂಡ ವಿಧಿಸಲಾಗಿದೆ. 35 ಜನ ಅರ್ಜಿದಾರರಿಗೆ ಪರಿಹಾರವನ್ನು ಒದಗಿಸಲಾಗಿದೆ ಎಂದು, ಕರ್ನಾಟಕ ಮಾಹಿತಿ ಆಯೋಗದ, ಕಲಬುರಗಿ ಪೀಠದ ಪ್ರಕಟಣೆ ತಿಳಿಸಿದೆ.

<><><>

ಕೃಷಿಯಲ್ಲಿ ನೀರಿನ ಸಮರ್ಪಕ ಬಳಕೆ, ಮಣ್ಣಿನ ಫಲವತ್ತತೆ ಸಂರಕ್ಷಣೆ, ಸಾವಯವ ಗೊಬ್ಬರಗಳ ಬಳಕೆ ಹಾಗೂ ಪರಿಸರ ಸ್ನೇಹಿ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ, ಸುಸ್ಥಿರ ಆಹಾರ ಉತ್ಪಾದನೆಗೆ ಉತ್ತೇಜನ ನೀಡುವುದು ಅತ್ಯವಶ್ಯಕವಾಗಿದೆ ಎಂದು, ಧಾರವಾಡದ ನೆಲ ಮತ್ತು ಜಲ ನಿರ್ವಹಣೆ ಸಂಸ್ಥೆ, ವಾಲ್ಮಿ ನಿರ್ದೇಶಕ, ಡಾಕ್ಟರ್ ಗಿರೀಶ ಮರಡ್ಡಿ ಹೇಳಿದ್ದಾರೆ. 'ಇಂದಿನ ಆವಿಷ್ಕಾರ; ನಾಳೆಯ ಪೋಷಣೆ' ಧ್ಯೇಯದೊಂದಿಗೆ, 'ವಿಶ್ವ ಆಹಾರ ದಿನಾಚರಣೆ – 2026' ಕಾರ್ಯಕ್ರಮಕ್ಕೆ, ಚಾಲನೆ ನೀಡಿ, ಅವರು ಮಾತನಾಡಿದರು.

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆತ್ಮನಿರ್ಭರ ಭಾರತ ಪರಿಕಲ್ಪನೆ, ದೇಶದ ನಿಜವಾದ ಶಕ್ತಿ, ತನ್ನ ಅಗತ್ಯಗಳನ್ನು ತಾನೇ ಪೂರೈಸುವ ಸಾಮರ್ಥ್ಯದಲ್ಲಿದೆ, ಎಂಬುದು. ಸಂಕ ್ಟಗಳನ್ನು ಎದುರಿಸಿಯೂ, ಸ್ಥೈರ್ಯದಿಂದ ಹೊಸ ಪರಿಹಾರಗಳನ್ನು ಕಂಡುಕೊಳ್ಳುವ ಸೃಜನಶೀಲತೆಯಲ್ಲಿದೆ ಎಂಬುದರ, ಮನಗಾಣುವಿಕೆ. 2020ರ ಮೇ 12ನೇ ತಾರೀಖು, ಕೋವಿಡ್–19ರ ಸಾಂಕ್ರಾಮಿಕದ ಸಂಕ ್ಟದ ಸಂದರ್ಭದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಘೋಷಿಸಿದ, ಆತ್ಮ ನಿರ್ಭರ ಭಾರತ ಅಭಿಯಾನ, ಭಾರತವನ್ನು ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿಸುವ ವಿಶಾಲ ಕಾರ್ಯತಂತ್ರ. ದೇಶೀಯ ಉತ್ಪಾದನೆಗೆ ಉತ್ತೇಜನ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಬಲೀಕರಣ, ಉದ್ಯೋಗ ಸೃಷ್ಟಿ, ತಂತ್ರಜ್ಞಾನ ಅಭಿವೃದ್ಧಿ ಹಾಗೂ ವಿದೇಶಿ ಆಮದುಗಳ ಮೇಲಿನ ಅತಿಯಾದ ಅವಲಂಬನೆಯನ್ನು ಕಡಿಮೆ ಮಾಡುವುದು ಆತ್ಮ ನಿರ್ಭರ ಭಾರತದ ಪ್ರಮುಖ ಉದ್ದೇಶ. ಆತ್ಮನಿರ್ಭರತೆ ಎಂದರೆ ಜಗತ್ತಿನಿಂದ ದೂರವಾಗುವುದಲ್ಲ; ಜಗತ್ತಿನೊಂದಿಗೆ ಸಮಾನ ಸಾಮರ್ಥ್ಯದಿಂದ ವ್ಯವಹರಿಸುವ ಶಕ್ತಿಯನ್ನು ಬೆಳೆಸಿಕೊಳ್ಳುವುದು. ವಿದೇಶಿ ತಂತ್ರಜ್ಞಾನವನ್ನು ಸಂಪೂರ್ಣವಾಗಿ ತಿರಸ್ಕರಿಸುವುದೂ ಅಲ್ಲ; ಸ್ವಂತ ಸಂಶೋಧನೆ, ನಾವೀನ್ಯತೆ ಮತ್ತು ಉತ್ಪಾದನಾ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವುದು, ಆತ್ಮನಿರ್ಭರ ಭಾರತದ ಅಂತಿಮ ಗುರಿ, 'ಭಾರತದಲ್ಲಿ ಆವಿ ್ಕರಿಸಿ, ಗುಣಮಟ್ಟದಿಂದ ಉತ್ಪಾದಿಸಿ, ಜಗತ್ತಿಗೆ ಕೊಡುಗೆ ನೀಡಿ' ಎಂಬುದಾಗಿದೆ.

<><><>

ಆತ್ಮ ನಿರ್ಭರ ಭಾರತ ಪ್ರಕಲ್ಪದಡಿ, ಪ್ರಧಾನಮಂತ್ರಿಗಳ, ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ, ನಿಯಮಬದ್ಧಗೊಳಿಸುವಿಕೆ ಯೋಜನೆ – ಪಿ.ಎಂ.ಎಫ್.ಎಂ.ಇ. ಅಡಿ, ಮಹಿಳೆಯರು, ಮಹಿಳಾ ಸ್ವಸಹಾಯ ಸಂಘಗಳು ಹಾಗೂ ರೈತ ಉತ್ಪಾದಕರ ಸಂಘಗಳು ಮತ್ತು ಯುವಜನತೆ, ಸಬ್ಸಿಡಿಯೊಂದಿಗೆ ಸಾಲ ಸೌಲಭ್ಯ ಪಡೆದು, ಸ್ವಾವಲಂಬಿ ಉದ್ಯಮಿಗಳು ಹಾಗೂ ಉದ್ಯೋಗದಾತರಾಗಲು ಸಾಧ್ಯವಿರುವ, ಮಹತ್ವಾಕಾಂಕ್ಷಿ ಯೋಜನೆ. ಈ ಕುರಿತು, ಮಾಹಿತಿ ನೀಡಿದ್ದಾರೆ, ಕೃಷಿ ಇಲಾಖೆಯ, ಧಾರವಾಡ ಜಂಟಿ ಕೃಷಿ ನಿರ್ದೇಶಕರ ಕಚೇರಿಯ, ಸಹಾಯಕ ನಿರ್ದೇಶಕ, ಚನ್ನಪ್ಪ ಅಂಗಡಿ.

<><><>

ಚನ್ನಪ್ಪ ಅಂಗಡಿ ಧ್ವನಿ 40 ಸೆಕೆಂದುಗಳು

<><><>

'ಎಲ್ಲರಿಗೂ ಸುರಕ್ಷಿತ ವಸತಿ' ಎಂಬ ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಬಡತನ ನಿರ್ಮೂಲನೆ ದಿನಾಚರಣೆ. 1992 ಅಕ್ಟೋಬರ್ 17ನೇ ತಾರೀಖು, ವಿಶ್ವಸಂಸ್ಥೆ, ಅಧಿಕೃತವಾಗಿ ಅಂತಾರಾಷ್ಟ್ರೀಯ ಬಡತನ ನಿರ್ಮೂಲನೆ ದಿನಾಚರಣೆಯನ್ನು, ಘೋಷಿಸಿತು. 1987 ರಲ್ಲಿ ಫ್ರಾನ್ಸ್ ನಲ್ಲಿ ಮೊದಲ ಬಾರಿಗೆ, ಬಡತನ ನಿರ್ಮೂಲನೆ ದಿನವನ್ನು ಆಚರಿಸಲಾಗಿತ್ತು. ಎಲ್ಲರೂ ಘನತೆಯೊಂದಿಗೆ, ಆಲ್ ಟುಗೇದರ್ ಇನ್ ಡಿಗ್ನಿಟಿ ಸಂಸ್ಥೆ ಸ್ಥಾಪಕ ಹಾಗೂ ಹೋರಾಟಗಾರ, ಜೋಸೆಫ್ ವ್ರೆಸಿನ್ಸ್ಕಿ,

ಟ್ರೋಕಾಡೆರೊದಲ್ಲಿ ಸ್ಮಾರಕ ಶಿಲೆಯನ್ನು ಅನಾವರಣಗೊಳಿಸಿ, ಅಂದು ಒಂದು ಲಕ್ಷ ಜನರನ್ನು ಒಗ್ಗೂಡಿಸಿ, ಬಡತನ, ಹಸಿವು, ಹಿಂಸಾಚಾರ ಮತ್ತು ಭಯಕ್ಕೆ ತುತ್ತಾದವರನ್ನು, ಸ್ಮರಿಸಿದ ಸ್ಮರಣೆ, ಇಂದು.

<><><>

ಭಾರತ, ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡಗಳ ನಡುವೆ, ಟಿ – 20 ಸರಣಿಯ, ಐದನೆ ಹಾಗೂ ಕೊನೆಯ ಪಂದ್ಯ, ಬೆಂಗಳೂರಿನ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ, ಇಂದು ಸಂಜೆ 7 ಗಂಟೆಗೆ, ನಡೆಯಲಿದೆ. ಹೈದರಾಬಾದ್‌ನಲ್ಲಿ ನಡೆದ ನಾಲ್ಕನೇ ಟಿ – 20 ಪಂದ್ಯದ ವೇಳೆ, ಅ ್ಯದೀಪ ಗಾಯಗೊಂಡ ಹಿನ್ನೆಲೆ, ಭುವನೇಶ್ವರ ಕುಮಾರ ತಂಡಕ್ಕೆ ಸೇರ್ಪಡೆಗೊಂಡಿದ್ದಾರೆ ಎಂದು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ, ಮಾಹಿತಿ ನೀಡಿದೆ. ಚಿನ್ನಸ್ವಾಮಿ ಕ್ರೀಡಾಂಗಣದ ಸುತ್ತ, ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಭಾರತ ಮತ್ತು ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡಗಳು, ತಲಾ 2 ಪಂದ್ಯಗಳಲ್ಲಿ, ಜಯ ಸಾಧಿಸಿ, ಫೈನಲ್ ತಲುಪಿವೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಆತ್ಮನಿರ್ಭರ ಭಾರತ: ಸ್ವದೇಶಿ ನಿರ್ಮಿತಿಯೊಂದಿಗೆ, ರಕ್ಷಣಾ ಕ್ಷೇತ್ರದ ಸ್ವಾವಲಂಬನೆ ಸಾಕಾರ – ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಶ್ಲಾಘನೆ.

'ಜನ ಸೇವೆಯಿಂದ, ದೇಶ ಸೇವೆ' ಮಾಸಿಕ ಅಭಿಯಾನ: ಆತ್ಮನಿರ್ಭರ ಭಾರತ ಪ್ರಕಲ್ಪದ, ಒಳನೋಟದೊಂದಿಗೆ, ಇಂದಿಗೆ ಸಂಪನ್ನ.

ಪ್ರೆಸ್ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ, ಯೋಗೇಶಕುಮಾರ ಬವೇಜಾ, ವಿವಿಧ ಮಾಧ್ಯಮಗಳ ಸಂಪಾದಕರೊಂದಿಗೆ, ಇಂದು ಬೆಂಗಳೂರಿನಲ್ಲಿ, ಸಂವಾದ.

ಭಾರತ ಹಾಗೂ ವೆಸ್ಟ್ ಇಂಡೀಸ್ ಮಧ್ಯೆ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ, ಇಂದು ಸಂಜೆ 7 ಗಂಟೆಗೆ, ಟಿ.20 ಕ್ರಿಕೆಟ್, ಫೈನಲ್ ಪಂದ್ಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>